MS – 037

**II Semester B.Sc. Examination, May/June 2014**
**(Freshers + Repeaters Scheme) (2011-12 and Onwards)**
**ಕನ್ನಡ ಭಾಷೆ – II**
**ಸಾಹಿತ್ಯ ಸಲ್ಲಾಪ – I**

Time : 3 Hours Max. Marks : 100

I. ಅ) ಈ ಪದ್ಯದ ಭಾವಾರ್ಥ ಬರೆಯಿರಿ : **(1×6=6)**

ಕಾವ ಬೆಸಂ ನಿನ್ನದು ಸಕ
ಲಾವನಿಯನ ಧರ್ಮ ನಿರತರಂ ನಿಯಮಿಸಿ ನೀ
ನೀ ವಿಷಯಕ್ಕೆರಗುವುದುಂ
ಕಾವರೆ ಕಣೆಗೊಂಡರೆಂಬ ನುಡಿಗೆಡೆಯಕ್ಕುಂ

ಆ) ಎರಡನ್ನು ಕುರಿತು ಟಿಪ್ಪಣಿ ಬರೆಯಿರಿ : **(2×3=6)**

ರಾಘವಾಂಕ, ಷಟ್ಪದಿ, ಹಿತ್ತಲ ಗಿಡ ಮದ್ದಲ್ಲ

II. ಅ) ಇವುಗಳಲ್ಲಿ **ಐದು** ಪದಗಳಿಗೆ ಮೂಲರೂಪ ಬರೆಯಿರಿ : **(5×1=5)**

ಚಂದಿರ, ಗೂಬೆ, ದಿಟ್ಟಿ, ಸಲಾಕೆ, ಅನ್ನೆಯ, ಹೋಟಲು, ಪ್ಯಾಂಟು.

ಆ) ಇವುಗಳಲ್ಲಿ **ಐದು** ಪದಗಳಿಗೆ ಅರ್ಥ ಬರೆಯಿರಿ : **(5×1=5)**

ಕೆಡೆನುಡಿ, ಕಲಂಕು, ಅನ್ವಯಾಗತ, ಎಲ್ಲೆಕಟ್ಟು, ತೆಂಕಣ, ಹರಣ ಮಾಡು, ತಿಂಬು.

ಇ) ಇವುಗಳಲ್ಲಿ **ಐದು** ಪದಗಳನ್ನು ಬಿಡಿಸಿ ಬರೆಯಿರಿ : **(5×1=5)**

ಕಣ್ಬೊಲ, ವಿಯಚ್ಚರ, ಮುಂಗಾರು, ಹೆಮ್ಮರ, ಪ್ರೇಮಾಗ್ನಿ, ಮೋಡಗಟ್ಟು, ಮೇಲ್ಚಲನೆ.

ಈ) ತೃಣ ಕಲ್ಪ, ಶ್ರೇಣೀಕರಣ – ಇದೇ ರೀತಿಯ **ಐದು** ಪದಗಳನ್ನು ಸ್ವಂತವಾಗಿ ರಚಿಸಿ. **(5×1=5)**

III. ಇವುಗಳಲ್ಲಿ **ನಾಲ್ಕು** ಪ್ರಶ್ನೆಗಳಿಗೆ ಸಂಕ್ಷಿಪ್ತ ಉತ್ತರ ಬರೆಯಿರಿ : **(4×5=20)**

1) ಚಂದ್ರಮತಿ ಇದ್ದ ಮನೆಯ ವಾತಾವರಣದ ಪರಿಚಯ ಮಾಡಿಕೊಡಿ.
2) 'ನಾವೆಲ್ಲರು ಒಂದೇ ಜಾತಿ' – ಕವಿತೆಯು ಸಾರುವ ಸಮಾನತೆಯನ್ನು ವಿವರಿಸಿ.
3) ''ಹೆಂಗಸರು ನಮ್ಮನ್ನು ಬಂಧನದಲಿಟ್ಟಿದ್ದಾರೆಯೇ ಹೊರತು ನಾವು ಅವರನ್ನಲ್ಲ'' ಪುತಿನ ರವರ ಈ ವಿಚಾರಧಾರೆ ಏನನ್ನು ಹೇಳುತ್ತದೆ ?
4) ಹಸಿವಿನಲ್ಲೇ ಬದುಕು ತುಂಬಿಸಿದ್ದ ಅಪ್ಪನ ಸಾವಿನ ಕೊನೆಯ ಕ್ಷಣಗಳು ಹೇಗಿದ್ದವು ?
5) ದೇವವಾಣಿ ಈಡಿಪಸ್‌ನ ಜೀವನದ ದಾರಿಯನ್ನು ಹೇಗೆ ಬದಲಿಸಿತು ?
6) ಈಡಿಪಸ್ ಮಾಡಿದ ತಪ್ಪು ಯಾವುದು ? ಅವನು ಅದಕ್ಕೆ ಎಷ್ಟರಮಟ್ಟಿಗೆ ಹೊಣೆ ?

P.T.O.

IV. ಇವುಗಳಿಗೆ ವಿವರವಾಗಿ ಉತ್ತರಿಸಿ : (4×12=48)

1) ಕಂದನನ್ನು ಕಳೆದುಕೊಂಡ ಚಂದ್ರಮತಿಯ ಅಳಲನ್ನು ಕುರಿತು ಬರೆಯಿರಿ.

**ಅಥವಾ**

'ಬಿದಿಯಂ ಮೀರುಗುಮೆ ಪೆರರ್ ಪೇಳ್ದುಪದೇಶಂ' – ಈ ಮಾತನ್ನು 'ಆ ಮುಖ – ಈ ಮುಖ' – ಕಾವ್ಯ ಭಾಗದ ಮೂಲಕ ಚರ್ಚಿಸಿ.

2) ವಸಾಹತು ಪೂರ್ವದ ಗೋಮಾಂಸದ ರಾಜಕಾರಣವನ್ನು ವಿವರಿಸಿ.

**ಅಥವಾ**

ಪ್ರೀತಿಯ ಬಂಧನದಲ್ಲಿ ಬುದ್ಧ ಮೋಕ್ಷ ಹುಡುಕಿದ್ದು ಹೇಗೆ ? ವಿವರಿಸಿ.

3) ಹಿಂದುಳಿದ ವರ್ಗಗಳ ಅಸಹಾಯಕತೆ ಹಾಗೂ ನೋವನ್ನು 'ಅವಶೇಷ' ಕತೆ ಹೇಗೆ ಚಿತ್ರಿಸಿದೆ ? ವಿಶದಪಡಿಸಿ.

**ಅಥವಾ**

ಸರಳ ಮದುವೆ ಕುರಿತಂತೆ ಕಡಿದಾಳು ಶಾಮಣ್ಣನವರ ನಿಲುವೇನು ? ಚರ್ಚಿಸಿ.

4) "ಈಡಿಪಸ್ ನಾಟಕ ಮನುಷ್ಯನ ಹುಟ್ಟಿನ ಹುಡುಕಾಟ" – ವಿಶ್ಲೇಷಿಸಿ.

**ಅಥವಾ**

ಥೀಬ್ಸ್‌ನಾಗರೀಕರು, ಕ್ರಯಾನ್, ಮೇಳದವರು – ಇವರಲ್ಲಿ ಎರಡು ಪಾತ್ರಗಳನ್ನು ಪರಿಚಯಿಸಿ.

---